**<u>ಹೆಚ್ಚುವರಿ  ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಮುಧೋಳ</u>**

**<u>ಸಿಸಿ ನಂ.721/2024</u>**

1) ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು ಮುಧೋಳ ಪೊಲೀಸ ಠಾಣೆ ...ಪಿರ್ಯಾದಿ.

**- ವಿರುದ್ಧ -**

1) ನಿಂಗಪ್ಪ @ ನಿಂಗರಾಜ ಅರ್ಜುನ ಬಿಸರೆಡ್ಡಿ
ವಯಾಃ31,  ಸಾಃಮುಧೋಳ, ತಾ-ಮುಧೋಳ, ಜಿ-ಬಾಗಲಕೋಟ
.....ಆರೋಪಿ

**ಉಪಸ್ಥಿತರುಃ ಶ್ರೀ.ವಿವೇಕ ಗ್ರಾಮೋಪಾಧ್ಯೆ,**
B.S.L. LL.B
ಹೆಚ್ಚುವರಿ, ಹಿರಿಯ  ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಮುಧೋಳ.

# -<u>: : ದೋಷಾರೋಪಣೆ: :</u>-

ಈ ಪ್ರಕರಣದ  ಪಿರ್ಯಾದಿಯು ಮುಧೋಳ ಮೋಟರ್ಸ ಎಂಬ ಹೆಸರಿನಲ್ಲಿ, ರಾಯಲ್ ಎನಪಿಲ್ಡ ಮೋಟರ ಸೈಕಲ ಶೋರೂಮದಲ್ಲಿ ದಿಃ05.02.2024 ರಿಂದ ದಿಃ10.04.2024 ರವರೆಗೆ ಸೇಲ್ಸ ಎಕ್ಸಿಕ್ಯೂಟಿವ್ ಅಂತಾ ಕೆಲಸ ಮಾಡಿಕೊಂಡು ಇದ್ದನು.

ಆರೋಪಿಯವರಾದ ನೀವು ದಿನಾಂಕಃ-09.04.2024 ರಂದು ಯುಗಾದಿ ಹಬ್ಬದ ಪ್ರಯುಕ್ತ ರಾಯ್ ಎನಪಿಲ್ಡನ 5 ವಾಹನಗಳು ಮಾರಾಟ ಆಗಿದ್ದು, ಸದರಿ ಮಾರಾಟದಿಂದ ಒಟ್ಟು ರೂ.10,21,110-00 ಗಳು ಇದ್ದು, ಪಿರ್ಯಾದಿಯು ಬಾಗಲಕೋಟದಲ್ಲಿನ ತನ್ನ ಶೋರೂಂದಲ್ಲಿ ಸಾಕಷ್ಟು ವಾಹನಗಳು ಮಾರಾಟ ಆದ ಕಾರಣ ಆ ದಿವಸ ಮುಧೋಳಕ್ಕೆ ಬರದ ಕಾರಣ ಹಾಗೂ ಆ ದಿವಸ ಬ್ಯಾಂಕಿಗೆ ರಜೆ ಇದ್ದ ಕಾರಣ ನೀವು ಸದರಿ ಹಣವನ್ನು ಮರುದಿವಸ ನೀಡುವುದಾಗಿ ಹೇಳಿ ನಂಬಿಸಿ, ಪಿರ್ಯಾದಿದಾರನು ಮರುದಿವಸ ದಿಃ10.04.2025 ರಂದು ತನ್ನ ಶೋರೂಂಗೆ ಬಂದಾಗ ಮನೆಯಲ್ಲಿ ಇಟ್ಟಿದ್ದೇನೆ ತೆಗೆದುಕೊಂಡು ಬರುವುದಾಗಿ ತಿಳಿಸಿ, ಸದರಿ ಹಣವನ್ನು ಪಿರ್ಯಾದಿಗೆ ನೀಡದೇ, ಬ್ಯಾಂಕಿಗೂ ಕಟ್ಟದೆ ಮೋಸ ಮಾಡಿ ರೂ.10,21,110-00 ಗಳಷ್ಟು ಹಣವನ್ನು ಮೋಸ ಮಾಡಿ ಆ ಮೂಲಕ ಭಾ.ದಂ.ಸಂ.ಕಲಂ.420 ರ ರೀತಿಯ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಸದರಿ ಹಣವನ್ನು ನಿಮ್ಮ ಮೇಲಿನ ವಿಶ್ವಾಸದಿಂದ ಪಿರ್ಯಾದಿ ಹಣವನ್ನು ಮರುಕಳಿಸದೇ ವಿಶ್ವಾಸವನ್ನು ತಾವು ಮುರಿದು ಆ ನಂಬಿಕೆಯ ಉಲ್ಲಂಘನೆ ಮಾಡಿ ಆ ಮೂಲಕ ಭಾ.ದ.ಸ ಕಲಂ.406 ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಸ್ಥಳ : ಮುಧೋಳ
ದಿನಾಂಕಃ 14-05-2025

ಓ ಹೇ ಕೇ ಸರಿ ಇದೆ.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಮುಧೋಳ.

**ಹೆಚ್ಚುವರಿ  ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ**

**ಸಿಸಿ ನಂ.721/2024**

1) ಕರ್ನಾಟಕ ಸರ್ಕಾರ ...ಪಿರ್ಯಾದಿ.
ಪ್ರತಿನಿಧಿಸುವವರು ಮುಧೋಳ ಪೊಲೀಸ ಠಾಣೆ

**- ವಿರುದ್ಧ -**

ಆ.1) ನಿಂಗಪ್ಪ @ ನಿಂಗರಾಜ ಅರ್ಜುನ ಬಿಸರೆಡ್ಡಿ

....ಆರೋಪಿ

**- ಃ ಆಪಾದನೆ ಃ -**

ಪ್ರಶ್ನೆ ಃ- 1)- ಈಗ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ತಿಳಿಯಿತೇ?

ಉತ್ತರಃ- ಆ.- ತಿಳಿದುಕೊಂಡಿದ್ದೇನೆ.

ಪ್ರಶ್ನೆ ಃ- 2) - ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ- ಆ.- ಇಲ್ಲ, ವಿಚಾರಣೆಯಾಗಬೇಕು.

ಸ್ಥಳ ಃ ಮುಧೋಳ
ದಿನಾಂಕಃ 14-05-2024

ಓ ಹೇ ಕೇ ಸರಿ ಇದೆ.
ಸಹಿ/-

ಹೆಚ್ಚುವರಿ  ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಮುಧೋಳ.